ಸಾಕ್ಷಿದಾರನನ್ನು ಕರೆಸಿ ಪ್ರಮಾಣೀಕರಿಸಲಾಯಿತು. ಪ್ರ.ಮಾ.ದಿಃ 09.07.2024

**ಪಾಟೀ ಸವಾಲು – ಪ್ರತಿವಾದಿ ಪರ ವಕೀಲರಿಂದ.**

ನಮ್ಮ ತಂದೆಯವರಿಗೆ ಪುರಸಭೆಯವರು ಕಟ್ಟಿದ ಮನೆಯನ್ನು ಕೊಟ್ಟಿರುತ್ತಾರೆ. ದಾವಾ ಆಸ್ತಿ ರಿ.ಸ.ನಂಃ 171/1 ಅ ಪ್ಲಾಟ್ ನಂಃ 69 ಕ್ಷೇತ್ರ 600 ಚದರ ಅಡಿ ಇದೆ. ದಾವಾ ಆಸ್ತಿ ಚೆಕ್ಕಬಂದಿ ಹೇಳಲು ಬರುವುದಿಲ್ಲ. ನಮ್ಮ ವಕೀಲರಿಗೆ ದಾವಾ ಆಸ್ತಿ ಮ್ಯಾಪ್ ತೆಗೆಯಲು ಮಾಹಿತಿಯನ್ನು ನೀಡಿರುವುದಿಲ್ಲ. ದಾವೆಯನ್ನು ಸಲ್ಲಿಸಲು ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿದ್ದೇನೆ. ಪುರಸಭೆಯವರು 2016 –2017 ರಲ್ಲಿ ನಮ್ಮ ತಂದೆಗೆ ಮನೆಯನ್ನು ನೀಡಿರುತ್ತಾರೆ. ನಮ್ಮ ತಂದೆಯವರಿಗೆ ಪುರಸಭೆಯವರು ಮನೆ ಕೊಟ್ಟಿರಲಿಲ್ಲ, ಖಾಲಿ ಜಾಗ ಕೊಟ್ಟಿದ್ದರು ಎಂದರೆ ಸರಿ. ನಾನು ಸಲ್ಲಿಸಿದ ಪ್ರಮಾಣಪತ್ರಕ್ಕೆ ಯಾರು ಮಾಹಿತಿ ಕೊಟ್ಟಿದ್ದಾರೆ ನನಗೆ ಗೊತ್ತಿಲ್ಲ ನನ್ನ ಮುಖ್ಯ ವಿಚಾರಣೆಯ 3 ನೇ ಪ್ಯಾರಾದಲ್ಲಿ ದಾವಾ ಆಸ್ತಿ ನಮ್ಮ ಮಾಲ್ಕಿ ಕಬ್ಜಾ ವಹಿವಾಟಿಯಲ್ಲಿ ಇರುತ್ತದೆ ಅಂತಾ ಹೇಳಿ ಬರೆಯಿಸಿರುವುದಿಲ್ಲ. ದಾವಾ ಆಸ್ತಿಯಲ್ಲಿ ಯಾರು ಮನೆ ನಿರ್ಮಿಸಿದ್ದಾರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಖಾಲಿ ಜಾಗೆಯಲ್ಲಿ ಪ್ರತಿವಾದಿ ಮನೆ ಕಟ್ಟಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯ ಮಗಳ ಬೆಟ್ಟದ ಮಲ್ಲೇಶ್ವರ ನಗರದಲ್ಲಿ ಸೈಟ್ ಇದೆ ಅಂತಾ ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಬೆಟ್ಟದ ಮಲ್ಲೇಶ್ವರ ನಗರದಲ್ಲಿ ಪ್ರತಿವಾದಿಯ ಮಗಳ ಹೆಸರಿಗೆ ಯಾವುದೇ ಸೈಟ್ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಆದ್ದರಿಂದ ಪ್ರತಿವಾದಿಯ ಮಗಳ ಸೈಟ್ ನಲ್ಲಿ ಮನೆ ಕಟ್ಟುವ ಪ್ರಸಂಗ ಬರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ತನ್ನ ಮಗಳ ಸೈಟಿನಲ್ಲಿ ಮನೆ ಕಟ್ಟಲು ಸಾಮಾನುಗಳನ್ನು ಇಡಲು ನಮ್ಮ ಮನೆ ತೆಗೆದುಕೊಂಡಿದ್ದ ಅಂತಾ ಸುಳ್ಳು ಬರೆಯಿಸಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಗೆ ಮನೆಯನ್ನು ಯಾವ ತಿಂಗಳು, ವರ್ಷ, ದಿನಾಂಕದಂದು ಕೊಟ್ಟ ಬಗ್ಗೆ ನಮ್ಮ ತಂದೆಗೆ ಗೊತ್ತು. ಪ್ರತಿವಾದಿ ತನ್ನ ಮಗಳ ಮನೆ ಕಟ್ಟಿದ ಮೇಲೆ ದಾವಾ ಆಸ್ತಿ ಬಿಟ್ಟುಕೊಡುತ್ತೇನೆಂತಾ ಹೇಳಿದ್ದ ಅಂತಾ ಸುಳ್ಳು ಬರೆಯಿಸಿದ್ದೇನೆಂದರೆ ಸರಿಯಲ್ಲ. ನಂತರ ಒಂದು ತಿಂಗಳು ಕಳೆದ ಮೇಲೆ ಮನೆ ಬಿಟ್ಟು ಕೊಡುತ್ತೇನೆಂತಾ ಬಿಟ್ಟು ಕೊಟ್ಟಿಲ್ಲ ಅಂತಾ ಸುಳ್ಳು ಬರೆಯಿಸಿದ್ದೇನೆಂದರೆ ಸರಿಯಲ್ಲ. ದಾವಾ ಮಾಡುವ ಕಾಲದಲ್ಲಿ ದಾವಾ ಆಸ್ತಿ 25 ಲಕ್ಷ ಕಿಮ್ಮತ್ತು ಇತ್ತು ಎಂದರೆ ಸರಿ. ನಮ್ಮ ತಂದೆ ಪ್ರತಿವಾದಿಗೆ ದಿನಾಂಕಃ 29.07.2002 ರಂದು ರೂ.14,500/- ಗಳಿಗೆ ಮಾರಾಟ ಮಾಡಿದ್ದಾನೆಂದರೆ ಸರಿಯಲ್ಲ. ಸದರಿ ದಿನ ಪಂಚರ ಸಮಕ್ಷಮ 14,500/- ರೂ ಪಡೆದುಕೊಂಡು ಖರೀದಿ ಕರಾರು ಪತ್ರವನ್ನು ನಮ್ಮ ತಂದೆ ಪ್ರತಿವಾದಿಯ ಹೆಸರಿಗೆ ಬರೆದುಕೊಟ್ಟಿದ್ದೇನೆಂದರೆ ಸರಿಯಲ್ಲ. ಸದರಿ ದಿನಾಂಕಃ 29.07.2002 ರಂದು ದಾವಾ ಆಸ್ತಿಯ ಕಬ್ಜಾವನ್ನು ನಮ್ಮ ತಂದೆ ಪ್ರತಿವಾದಿಗೆ ನೀಡಿದ್ದಾನೆಂದರೆ ಸರಿಯಲ್ಲ. 2003 ನೇ ವರ್ಷದಲ್ಲಿ ಪ್ರತಿವಾದಿ 3-4 ಲಕ್ಷ ಹಣ ಖರ್ಚು ಮಾಡಿ ದಾವಾ ಆಸ್ತಿಯಲ್ಲಿ ಮನೆ ಕಟ್ಟಿದ್ದಾನೆಂದರೆ ಸರಿಯಲ್ಲ. ಸದರಿ ಮನೆಯಲ್ಲಿ 2003 ರಿಂದ ಪ್ರತಿವಾದಿ ಮತ್ತು ಆತನ ಕುಟುಂಬದವರು ವಾಸವಾಗಿದ್ದಾರೆಂದರೆ ಸರಿ. 2003 ರಿಂದ ದಾವಾ ಆಸ್ತಿಯ ಕರ ಆಕರ ಪ್ರತಿವಾದಿ ತುಂಬುತ್ತಾ ಬಂದಿರುತ್ತಾನೆ ಎಂದರೆ ಸರಿಯಲ್ಲ. ನಾವು ಎಂದಿಗೂ ದಾವಾ ಆಸ್ತಿಯ ಕರ ಆಕರ ತುಂಬದೇ ಇದ್ದರೂ ಸಹಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿ 12 ವರ್ಷಕ್ಕಿಂತ ಹೆಚ್ಚಿಗೆ ದಾವಾ ಆಸ್ತಿಯಲ್ಲಿ ಮನೆ ಕಟ್ಟಿಕೊಂಡು ವಾಸವಾಗಿದ್ದರಿಂದ

ವಿರುದ್ದ ಹಕ್ಕಿನಿಂದ ಮಾಲೀಕನಿರುತ್ತಾನೆಂದರೆ ಸರಿಯಲ್ಲ. ಪ್ರತಿವಾದಿ ಮತ್ತು ಆತನ ಕುಟುಂಬದವರು 2003 ರಿಂದ ಇಲ್ಲಿಯವರೆಗೆ ದಾವಾ ಆಸ್ತಿಯಲ್ಲಿ ವಾಸವಾಗಿರುವುದು ನಮಗೆ ಗೊತ್ತಿದೆ ಎಂದರೆ ಸರಿ. ನಾನು ಮತ್ತು ನನ್ನ ಕುಟುಂಬದವರು ಸುಳ್ಳು ದಾವೆಯನ್ನು ಸಲ್ಲಿಸಿ, ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ದಿವಾಣಿ ನ್ಯಾಯಾಧೀಶರು,
ಬ್ಯಾಡಗಿ.